ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ 28ನೇ ಆಗಸ್ಟ್ 1997 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10.20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು

ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅರಗು ಮತ್ತು ಬಣ್ಣದ ಕಾರ್ಖಾನೆ

557 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅರಗು ಮತ್ತು ಬಣ್ಣದ ಕಾರ್ಖಾನೆಯು ಲಾಭದಾಯಕವಾಗಿ ನಡೆಯುತ್ತಿದೆಯೇ?*

ಆ) *ಎಲ್ಲಾ ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳು ಹಾಗೂ ಸರ್ಕಾರಿ ಕಛೇರಿಗಳು ಈ ಕಾರ್ಖಾನೆಯ ಬಣ್ಣಗಳನ್ನು ಖರೀದಿಸಬೇಕೆಂದು ಸರ್ಕಾರವು ಆದೇಶ ಹೊರಡಿಸಿದೆಯೇ?*

ಇ) *ಹಾಗಿದ್ದಲ್ಲಿ, ಈ ಆದೇಶದ ಪಾಲನೆಯು ಸರಿಯಾಗಿ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?*

ಶ್ರೀ ಆರ್. ವಿ. ದೇಶ್‌ಪಾಂಡೆ (ಬಹ್ಯತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ಹೌದು.

ಇ) ಹೌದು.

ಈ) ಎಲ್ಲಾ ಸರ್ಕಾರಿ ಇಲಾಖೆಗಳು ಹಾಗೂ ಸರ್ಕಾರಿ ಸ್ವಾಮ್ಯದ ಕಂಪನಿ/ನಿಗಮಗಳು ಮೈಸೂರು ಬಣ್ಣ ಮತ್ತು ಅರಗು ಕಾರ್ಖಾನೆ ತಯಾರಿಸುವ ಉತ್ಪನ್ನಗಳನ್ನು ಕಡ್ಡಾಯವಾಗಿ ಸದರಿ

ಕಂಪನಿಯ ವತಿಯಿಂದಲೇ ಖರೀದಿಸುವಂತೆ ದಿನಾಂಕ 22-7-97ರ ಸುತ್ತೋಲೆಯಲ್ಲಿ ಆಗ್ರಹಪೂರ್ವಕ ವಾಗಿ ಒತ್ತಾಯಿಸಲಾಗಿದೆ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಮೈಸೂರಿನಲ್ಲಿ ಇರತಕ್ಕಂಥ ಈ ಬಣ್ಣದ ಕಾರ್ಖಾನೆ, ಇದು ಸರ್ಕಾರಿ ಕಾರ್ಖಾನೆ, ಇದು ಲಾಸ್‌ನಲ್ಲಿ ನಡೆಯುತ್ತಿದೆ. ನಮ್ಮ ಸರ್ಕಾರದ ಆದೇಶದಂತೆ ನಮ್ಮ ಎಲ್ಲಾ ಇಲಾಖೆಗಳು ಮತ್ತ ಸರ್ಕಾರಿ ಸಾಮ್ಯದ ಎಲ್ಲಾ ಬೇರೆ ಬೇರೆ ಪಬ್ಲಿಕ್ ಸೆಕ್ಟರ್ಸ್ ಎಲ್ಲಾ ಇಲ್ಲಿಂದಲೇ ಬಣ್ಣ ತೆಗೆದುಕೊಳ್ಳಬೇಕು ಎಂಬ ಆದೇಶವನ್ನು ಮಾಡಿದ್ದೀರಿ, ಹಿಂದೆ ನಾನು ಈ ಇಲಾಖೆಯ ಮಂತ್ರಿಯಾಗಿದ್ದಾಗ ನಾನು ಕೂಡ ಒತ್ತಾಯ ಮಾಡಿದ್ದೆ. ಆದರೆ ನೆನ್ನ ಒಂದು ಪ್ರಶ್ನೆಯಲ್ಲಿ ಈ ಆದೇಶದ ಪಾಲನೆ ಸರಿಯಾಗಿ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಅಂದರೆ ಹೌದು ಎಂದು ಉತ್ತರವನ್ನು ಕೊಟ್ಟಿದ್ದಾರೆ. ಏಕೆ ಬಣ್ಣವನ್ನು ತೆಗೆದುಕೊಳ್ಳುತ್ತಿಲ್ಲ ಸನ್ಮಾನ್ಯ ಸಚಿವರೇ? ನಮ್ಮ ಬಣ್ಣದ ಕಾರ್ಖಾನೆಯಲ್ಲಿ ಇರತಕ್ಕ ಪೇಂಟ್ ಒಳ್ಳೆಯ ಕ್ವಾಲಿಟಿ ಪೇಂಟ್. ಮತ್ತು ನಮ್ಮ ಸರ್ಕಾರದಲ್ಲಿರತಕ್ಕ ಎಲ್ಲಾ ಇಲಾಖೆಗಳು ಅಲ್ಲೇ ತೆಗೆದುಕೊಳ್ಳಬೇಕು ಎಂಬ ಒಂದು ಸರ್ಕಾರದ ಆದೇಶ ಕೂಡ ಇದೆ. ಈ ರೀತಿ ಆದೇಶ ಇದ್ದರೂ ಕೂಡ ಅದನ್ನು ಸರಿಯಾಗಿ ಪಾಲಿಸುತ್ತಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ನಾನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. ಆದೇಶವನ್ನು ಕೊಟ್ಟಿದ್ದೇವೆ. ಈ ಪಬ್ಲಿಕ್ ಸೆಕ್ಟರ್ಸ್ ಇರಬಹುದು, ಜಿಲ್ಲಾಪಂಚಾಯತ್ ಇರಬಹುದು. ಪಿಡಬ್ಲ್ಯೂಡಿ ಇರಬಹುದು, ಎಲ್ಲೆಲ್ಲಿ ಈ ಬಣ್ಣ ಬೇಕಾಗುತ್ತದೆ, ಅದನ್ನು ಇಲ್ಲಿಂದಲೇ ತೆಗೆದುಕೊಳ್ಳಬೇಕು ಎಂದು ನಾವು ಆದೇಶವನ್ನು ಕೊಟ್ಟಿದ್ದೇವೆ. ಆದೇಶಕ್ಕೆ ಬಹಳ ಜನ ಸಹಕಾರ ಕೊಡುತ್ತಿದ್ದಾರೆ. ಜಿಲ್ಲಾ ಪಂಚಾಯತ್‌ಗಳವರು ಇಲ್ಲಿಂದ ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಮತ್ತು ಕೆ.ಎಸ್.ಆರ್.ಟಿ.ಸಿ. ಯವರು 80ಪರ್ಸೆಂಟ್ ತೆಗೆದುಕೊಳ್ಳುತ್ತಿದ್ದಾರೆ. ಈ ಆದೇಶವನ್ನು ಇನ್ನು ಸರಿಯಾಗಿ ಜಾರಿಗೆ ತರಬೇಕು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಪುನಃ 22-7-97ರಂದು ಸುತ್ತೋಲೆ ಮುಖಾಂತರ ತಿಳಿಸಿದ್ದೇವೆ. ಎಲ್ಲಾ ಪಬ್ಲಿಕ್ ಅಂಡರ್‌ಟೇಕಿಂಗ್ಸ್, ಸರ್ಕಾರಿ ಇಲಾಖೆಗಳು, ಮೈಸೂರು ಪೇಂಟ್ಸ್‌ರವರಿಂದಲೇ ಬಣ್ಣ ಖರೀದಿಸಬೇಕೆಂದು ಆದೇಶ ಕಳುಹಿಸಿದ್ದೇವೆ. ಇದನ್ನು ಸರಿಯಾಗಿ ಜಾರಿಗೆ ತರಲಿಕ್ಕೆ ಪ್ರಯತ್ನ ಮಾಡುತ್ತಿದೆ.

ಶ್ರೀ ರಾಮಲಿಂಗಾರೆಡ್ಡಿ : ಸರ್ಕಾರದ ಆದೇಶ ಆಂದ ಮೇಲೆ ಅದನ್ನು ಸರಿಯಾಗಿ ಕಡ್ಡಾಯವಾಗಿ ಪಾಲಿಸಬೇಕು ತಾನೇ? ಏಕೆ ಪಾಲಿಸುತ್ತಿಲ್ಲ, ಪಾಲಿಸದೇ ಇದ್ದವರ ಮೇಲೆ ಕ್ರಮ ಕೈಗೊಳ್ಳಬೇಕು ತಾನೇ?

ಶ್ರೀ ಆರ್. ವಿ. ದೇಶಪಾಂಡೆ : ಒಂದು ಸಲ ಅವರಿಗೆ ಅವಕಾಶವನ್ನು ಕೊಟ್ಟು ನಂತರವು ಅವರು ಈ ಆದೇಶವನ್ನು ಪಾಲಿಸಲಿಲ್ಲ ಎಂದರೆ ಅವರ ಮೇಲೆ ಖಂಡಿತ ಕ್ರಮ ಕೈಗೊಳ್ಳುತ್ತೇನೆ.

ಮಾಗಡಿ ಪಟ್ಟಣದ ಪುರಸಭೆಗೆ ಹೊಸ ಕಛೇರಿ ಕಟ್ಟಡ

558 - ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಪೌರಾಡಳಿತ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?